ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಜೆಎಂಎಫ್‌ಸಿ ನ್ಯಾಯಾಲಯ, ಕೆಜಿಎಫ್

ಸಿ.ಸಿ.ನಂ.876/2023

ಡಿಡಬ್ಲ್ಯೂ:1

ದಿನಾಂಕಃ 14.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು– | ಚಂದ್ರ ಶೇಖರ |
| ತಂದೆಯ ಹೆಸರು– | ರಾಮಣ್ಣ |
| ವಯಸ್ಸು – | 40 ವರ್ಷ |
| ಉದ್ಯೋಗ– | ಖಾಸಗಿ ಕೆಲಸ |
| ವಾಸ– | ಬೆಂಗಳೂರು |

**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ**

1. ಪಿರ್ಯಾದುದಾರರು ಹಣಕಾಸಿನ ವ್ಯವಹಾರ ಮಾಡುತ್ತೇನೆ ಎಂದು ಹೇಳಿ ನನಗೆ ಪರಿಚಯ ಆಗಿರುತ್ತಾರೆ. ಪಿರ್ಯಾದುದಾರರು ನನಗೆ ಸಾಲವನ್ನು ತೆಗೆದುಕೊಳ್ಳಿ ಎಂದು ಒತ್ತಾಯ ಮಾಡುತ್ತಿದ್ದರು ಆದರೆ ನಾನು ತೆಗೆದುಕೊಂಡಿರುವುದಿಲ್ಲ. 2017–18 ರಲ್ಲಿ ಪಿರ್ಯಾದುದಾರರು ಕಂಪನಿಯ ಹೆಸರಿನಲ್ಲಿ ಸಾಲವನ್ನು ತೆಗೆದುಕೊಳ್ಳಿ ಎಂದು ಹೇಳಿ ಒತ್ತಾಯ ಮಾಡಿ ರಾ.3,00,000/– ನಗದಾಗಿ ನಮ್ಮ ಕಂಪನಿಗೆ ಕೊಟ್ಟಿರುತ್ತಾರೆ. ಸದರಿ ಸಾಲವನ್ನು ನಾವು ಮರುಪಾವತಿ ಮಾಡಿರುತ್ತೇವೆ. ಆ ಸಮಯದಲ್ಲಿ ಪಿರ್ಯಾದುದಾರರು ಕಂಪನಿಗೆ ಸಂಬಂಧಿಸಿದ ಒಂದು ಚೆಕ್ಕನ್ನು ಭದ್ರತೆಗಾಗಿ ಪಡೆದುಕೊಂಡಿದ್ದರು. 2022 ರಲ್ಲಿ ನಾನು ಕಂಪನಿಗೆ ಸಂಬಂಧಿಸಿದ ಬ್ಯಾಂಕ್ ಖಾತೆಯನ್ನು ಮುಕ್ತಾಯ ಮಾಡಿರುತ್ತೇನೆ. ಆ ಸಮಯದಲ್ಲಿ ನಾನು ಪಿರ್ಯಾದುದಾರರಿಗೆ ನೀಡಿದಂತಹ ಚೆಕ್ಕನ್ನು ಹಿಂದಕ್ಕೆ ಕೊಡಲು ಕೇಳಿಕೊಂಡಿರುತ್ತೇನೆ. ಪಿರ್ಯಾದುದಾರರು ಅಂಚೆ ಮುಖಾಂತರ ಚೆಕ್ಕನ್ನು ಕಳುಹಿಸಿರುತ್ತೇನೆ ಎಂದು ಹೇಳಿದ್ದರು ಆದರೆ ಕಳುಹಿಸಿರುವುದಿಲ್ಲ. 2023 ರಲ್ಲಿ ಸದರಿ ಚೆಕ್ಕನ್ನು ನಗದೀಕರಣಕ್ಕಾಗಿ ಬ್ಯಾಂಕ್ ಗೆ ಸಲ್ಲಿಸಿರುತ್ತಾರೆ. ಪಿರ್ಯಾದುದಾರರು ನನ್ನ ಗಮನಕ್ಕೆ ಬಾರದ ಹಾಗೆ ಚಕ್ಕನ್ನು ಬ್ಯಾಂಕ್ ಗೆ ಸಲ್ಲಿಸಿರುತ್ತಾರೆ. ನನ್ನ ಮತ್ತು ಪಿರ್ಯಾದುದಾರರ ನಡುವೆ ವ್ಯಯಕ್ತಿಕವಾಗಿ ಯಾವುದೇ ಹಣಕಾಸಿನ ವ್ಯವಹಾರ ಇರುವುದಿಲ್ಲ ಆದರೆ ಕಂಪನಿಗೆ ಸಂಬಂಧಿಸಿದಂತೆ ನೀಡಿದಂತಹ ಚೆಕ್ಕನ್ನು ಉಪಯೋಗಿಸಿ ನನ್ನ ವಿರುದ್ಧ ಈ ಪ್ರಕರಣವನ್ನು ದಾಖಲಿಸಿರುತ್ತಾರೆ. ಕಂಪನಿಗೆ ಸಂಬಂಧಿಸಿದ 96 ನೇ ಪುಟಗಳಿಂದ ಕೂಡಿರುವ

ಬ್ಯಾಂಕ್ ಸ್ಟೇಟ್ ಮೆಂಟ್ ನಿಡಿ-1, ಖಾತೆ ಮುಕ್ತಾಯ ಆದ ಬಗ್ಗೆ ಸ್ಟೇಟ್ ಮೆಂಟ್ ನಿಡಿ-2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರಿಂದಃ**

ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಜಯಲಕ್ಷ್ಮೀ ಎನ್. ಬಿ)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್